೨

ಜೇಕಬ್ ಥಾರು (ಜೇಕಬ್) ಅವರೊಂದಿಗೆ ಸಂದರ್ಶನ

ಸಂದರ್ಶಿಸಿದವರು: ಗೀತಾ ದೊರೈರಾಜನ್ (ಗೀತಾ) ಹಾಗೂ ಲೀನಾ ಮುಖ್ಯೋಪಾಧ್ಯಾಯ್ (ಲೀನಾ)

ಸಾರಾಂಶ: ಈ ಸಂದರ್ಶನವು ಶೈಕ್ಷಣಿಕ ಮೌಲ್ಯಮಾಪನದಲ್ಲಿ ಪ್ರಸ್ತುತವಾಗಿ ಚರ್ಚಿಸಲಾಗುತ್ತಿರುವ 'ನಿರಂತರ ಹಾಗೂ ಸಮಗ್ರ ಮೌಲ್ಯಮಾಪನ'ದ (continuous and comprehensive evaluation - CCE) ಅನುಷ್ಠಾನದ ಬಗ್ಗೆ ಚರ್ಚಿಸುತ್ತದೆ. ಮಗುವು ಜ್ಞಾನದ ಸಹಸೃಷ್ಟಿಕಾರ, ಆದ್ದರಿಂದ ಅವನು/ಳು ಪಠ್ಯಕ್ರಮದ ನಿರ್ವಹಣೆಯಲ್ಲಿ ಭಾಗವಹಿಸುತ್ತಾನೆ/ಳೆ ಎಂಬ ವಿಚಾರವನ್ನು ಹಾಗೂ ತರಗತಿಯಲ್ಲಿ ಪಠ್ಯಪುಸ್ತಕದಾಚೆಗಿನ ಕಲಿಕೆಯ ಪ್ರಾಮುಖ್ಯವನ್ನು ಇಲ್ಲಿ ಚರ್ಚಿಸಲಾಗಿದೆ.

ಪ್ರಮುಖ ಪದಗಳು: ನಿರಂತರ ಹಾಗೂ ಸಮಗ್ರ ಮೌಲ್ಯಮಾಪನ– continuous and comprehensive evaluation, ಪಠ್ಯಪುಸ್ತಕವನ್ನು ಮೀರಿ ಹೋಗುವುದು– beyond the textbook, ಮಗುವು ಜ್ಞಾನದ ಸಹ–ಸೃಷ್ಟಿಕರ್ತ, child is a co-constructor of knowledge, ಪರಿಹಾರಾತ್ಮಕ ಬೋಧನೆ– remedial teaching.

ಮನಶ್ಶಾಸ್ತ್ರದ ವಿದ್ಯಾರ್ಥಿ ಹಾಗೂ ಶೈಕ್ಷಣಿಕ ಮೌಲ್ಯಮಾಪನದಲ್ಲಿ ವಿಶೇಷ ಆಸಕ್ತಿಯನ್ನುಳ್ಳ ಜೇಕಬ್ ಥಾರು ಅವರು ಸಿಫೆಲ್ (CIEFL)ನ (ಈಗ EFL ವಿಶ್ವವಿದ್ಯಾಲಯವೆಂದು ಕರೆಯಲಾಗುವ) ಮೌಲ್ಯಮಾಪನ ವಿಭಾಗದಲ್ಲಿ ಮೂವತ್ತು ವರ್ಷಗಳ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ನಿವೃತ್ತಿಯ ಬಳಿಕ, ಶಿಕ್ಷಣ ವಲಯದಲ್ಲಿ ಕೆಲಸ ಮಾಡುತ್ತಿರುವ ಹಲವಾರು ಸ್ವಯಂಸೇವಾ ಸಂಸ್ಥೆಗಳೊಡನೆ ಕೆಲಸ ಮಾಡುತ್ತಿದ್ದಾರೆ. ಇದಲ್ಲದೆ ಅವರು ನ್ಯಾಷನಲ್ ಕೌನ್ಸಿಲ್ ಆಫ್ ಎಜುಕೇಶನಲ್ ರಿಸರ್ಚ್ ಅಂಡ್ ಟ್ರೈನಿಂಗ್‌ನಲ್ಲಿ (NCERT) ಮೌಲ್ಯಮಾಪನ ಸಂಬಂಧಿತ ಯೋಜನೆಗಳಲ್ಲಿ, ಕೆಲವು ರಾಜ್ಯದ SCERTಗಳಲ್ಲಿ ಹಾಗೂ ಸರ್ವ ಶಿಕ್ಷಣ ಅಭಿಯಾನದ ಜೊತೆ ತೊಡಗಿಸಿಕೊಂಡಿದ್ದಾರೆ.

ಈ ಸಂದರ್ಶನವನ್ನು ಗೀತಾ ದೊರೈರಾಜನ್ ಹಾಗೂ ಲೀನಾ ಮುಖ್ಯೋಪಾಧ್ಯಾಯ್ ಅವರು ಧ್ವನಿ ಮುದ್ರಣದಿಂದ ಲಿಪಿ ರೂಪಕ್ಕೆ ತಂದು ಅದನ್ನು ಪರಿಷ್ಕರಿಸಿದ್ದಾರೆ.

* * *

ಗೀತಾ: ನಮಸ್ಕಾರ. ಶೈಕ್ಷಣಿಕ ಮೌಲ್ಯಮಾಪನದಲ್ಲಿ ಪ್ರಸ್ತುತ ಚರ್ಚಿಸಲಾಗುತ್ತಿರುವ ವಿಚಾರ 'ನಿರಂತರ ಹಾಗೂ ಸಮಗ್ರ ಮೌಲ್ಯಮಾಪನ'ದ (continuous and comprehensive evaluation - CCE) ಕುರಿತಾಗಿದೆ. ಇದರ ಬಗ್ಗೆ ನಿಮ್ಮ ಅನಿಸಿಕೆಗಳೇನು ಹಾಗೂ ಇದು ತರಗತಿಯೊಳಗೆ ಶಿಕ್ಷಕ/ಕಿಗೆ ಹೇಗೆ ಮುಖ್ಯವಾದ ವಿಚಾರವೆಂಬುದನ್ನು ತಿಳಿಸುತ್ತೀರಾ?

ಜೇಕಬ್: ಹೌದು, ನಾವು ನಿರಂತರ ಹಾಗೂ ಸಮಗ್ರ ಮೌಲ್ಯಮಾಪನದ (ಸಿಸಿಇ) ಬಗ್ಗೆ ಕಳೆದ ಎರಡು-ಮೂರು ವರ್ಷಗಳಿಂದ ಮಾತನಾಡುತ್ತಿದ್ದೇವೆ. ಆದರೆ ಈ ಘೋಷಣೆಯು ಕಳೆದ ಮೂವತ್ತು ವರ್ಷಗಳಿಂದ ಚಾಲ್ತಿಯಲ್ಲಿದೆ ಎಂಬುದನ್ನು ನಾವು ಮರೆತಂತೆ ಕಾಣುತ್ತದೆ. ಮೊದಲ ಬಾರಿಗೆ ಇದನ್ನು ೧೯೮೫-೮೬ರ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಪ್ರಸ್ತಾವಿಸಲಾಗಿತ್ತು. ಅಂದಿನಿಂದ ಇದು ನಿಧಾನವಾಗಿ ರೂಪವನ್ನು ಪಡೆಯುತ್ತಾ ಮುಂದುವರಿಯಿತು. ನನ್ನ ಮಟ್ಟಿಗೆ ಸಿಸಿಇ ತರಗತಿಯಲ್ಲಿ ಆಗಾಗ್ಗೆ ಮಾಡುವ ಪರೀಕ್ಷೆಗಳಿಗಿಂತಲೂ ಹೆಚ್ಚಿನದು. ೨೦೦೫ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (NCF) ಆದಮೇಲಿನ, ಅಂದರೆ ಪ್ರಸ್ತುತ ಇರುವ ಸಿಸಿಇಯು ಆ ಮೊದಲಿಗಿದ್ದ ಸಿಸಿಇಗಿಂತ ಭಿನ್ನವಾಗಿದೆ ಅಂತ ನನಗನಿಸುತ್ತೆ. ವಿದ್ಯಾರ್ಥಿಗಳು ಸಂಪಾದಿಸುವ ಬೌದ್ಧಿಕ ಜ್ಞಾನದ ಬಗ್ಗೆ ಇದು ಹೊಸದಾದ ತತ್ತ್ವದರ್ಶನವನ್ನು ಹೊಂದಿದೆ. NCFನಲ್ಲಿ ಮೊದಲ ಬಾರಿಗೆ ಅನೇಕ ವಿಚಾರಗಳನ್ನು ಕ್ರೋಢೀಕರಿಸಿ ಹೊಸದೊಂದು ಕಾಣ್ಕೆಯನ್ನು ರೂಪಿಸಲಾಯಿತು. ಇವುಗಳಲ್ಲಿ ಕೆಲವು ಸಿಸಿಇಗೆ ಬಹಳ ಪ್ರಸ್ತುತವಾಗಿದ್ದು, ಅವುಗಳನ್ನು ಈ ಮುಂದಿನಂತೆ ವಿವರಿಸಬಹುದು:

ಮೊದಲಿಗೆ- ಮಗುವು ಜ್ಞಾನದ ಸಹ-ಸೃಷ್ಟಿಕರ್ತ, ಆದ್ದರಿಂದ ಮಗುವೂ ಪಠ್ಯಕ್ರಮದ ನಿರ್ವಹಣೆಯಲ್ಲಿ ಭಾಗವಹಿಸುವವನೇ ಆಗುತ್ತಾನೆ/ಳೆ. ಈ ವಿಚಾರವು ಹೊಸದಲ್ಲದಿದ್ದರೂ, ಪಠ್ಯಕ್ರಮದ ಹೇಳಿಕೆಯಲ್ಲಿ ಇದು ವ್ಯಕ್ತವಾಗುವುದು ಬಹಳ ಮುಖ್ಯವಾಗಿದೆ. ಎರಡನೆಯದಾಗಿ, ಪಠ್ಯಪುಸ್ತಕವನ್ನು ಮೀರಿ ಹೋಗುವುದರ ಪ್ರಾಮುಖ್ಯವನ್ನು ಇಲ್ಲಿ ಎತ್ತಿಹಿಡಿಯಲಾಗಿದೆ ಹಾಗೂ ಶಾಲೆಯ ಜ್ಞಾನವೆಂಬುದನ್ನು ಅರ್ಥೈಸಲು ಶಾಲೆಯ ಆಚೆಗೆ ಬದುಕಿನ ಜೊತೆ ಸಂಬಂಧ ಕಲ್ಪಿಸಬೇಕು ಎನ್ನುತ್ತದೆ. ಇವೆರಡು ವಿಚಾರಗಳ ಜೊತೆಗೆ, ಮೂರನೆಯದಾಗಿ, ವೈವಿಧ್ಯದ ಮಹತ್ತ್ವವನ್ನು

ಗುರುತಿಸುವುದಷ್ಟೇ ಅಲ್ಲದೆ, ಅದು ಸಂಭ್ರಮಿಸುವ ವಿಚಾರವೆಂದು ಸಿಸಿಇ ಹೇಳುತ್ತದೆ. ಈ ವಿಚಾರಗಳನ್ನು ಸೃಜನಶೀಲವಾಗಿ ಎನ್‌ಸಿಎಫ್ (NCF) ದಾಖಲೆಯಲ್ಲಿ ಒಟ್ಟಿಗೆ ತಂದು, ಮಗುವೊಂದರ ಕಲಿಕೆಯ ಹಾದಿಯು ಪೂರ್ವನಿರ್ಧಾರಿತವಾದುದಲ್ಲ ಎಂಬ ಅಭಿಪ್ರಾಯವನ್ನು ಒತ್ತಿಹೇಳಲಾಗಿದೆ. ಬೋಧನೆ–ಕಲಿಕೆಯ ದೃಷ್ಟಿಯಲ್ಲಿ ಸಾಂಪ್ರದಾಯಿಕ ಯಶಸ್ಸಿನ ಶೈಕ್ಷಣಿಕ ಮೌಲ್ಯವು ಬಹಳ ಗೌಣವಾದುದು ಎಂದು ತೋರಿಸಿಕೊಡಲಾಗಿದೆ. ಯಾವುದೇ ತರಗತಿಯ ಒಂದು ಘಟಕ ಅಥವಾ ಸೆಮಿಸ್ಟರ್ ಅಥವಾ ವರ್ಷಾವಧಿಯ ಕೊನೆಯಲ್ಲಿ ನಡೆಸುವ ಪರೀಕ್ಷೆಗಳು ಈಗಾಗಲೇ ನಿರ್ಧರಿಸಿರುವ ವಿಚಾರಗಳನ್ನು ಕುರಿತ ಕಲಿಕೆಯನ್ನು ಮಾಪನ ಮಾಡುತ್ತವೆಯೇ ಹೊರತು ಮತ್ತೇನನ್ನೂ ಅಲ್ಲ. ಅವು ಸಂಕಲನಾತ್ಮಕವಾದವು ಆಗಿವೆ. ಅವು ಬೋಧನೆಯ ಅನಂತರ ವಿದ್ಯಾರ್ಥಿಯ ಕಲಿಕೆಯ ಮಟ್ಟವನ್ನು ಪರೀಕ್ಷಿಸುತ್ತವೆ. ಇವು ಯಾವ ರೀತಿಯ ಶೈಕ್ಷಣಿಕ ಮೌಲ್ಯ ಹೊಂದಿರಲು ಸಾಧ್ಯ? ಎನ್‌ಸಿಎಫ್‌ನ ಒಟ್ಟಾರೆ ದೃಷ್ಟಿಕೋನವು ಊಹಿಸಲಾಗದ ಕಲಿಕೆಯನ್ನು ಗುರುತಿಸುತ್ತದೆ. ಸಿಸಿಇ, ಈ ವಿಶಾಲ ವ್ಯಾಪ್ತಿಯನ್ನು ಪ್ರಸ್ತುತವಾಗಿಸುವುದಲ್ಲದೆ, ನನ್ನ ಅನಿಸಿಕೆಯ ಪ್ರಕಾರ ಅದನ್ನು ಸಾಧ್ಯವಾಗಿಸುತ್ತದೆ.

ಗೀತಾ: ಇದನ್ನು ಮತ್ತಷ್ಟು ಸ್ಪಷ್ಟಪಡಿಸುತ್ತೀರಾ?

ಜೇಕಬ್: ಇದು ಬಹಳ ಪ್ರಬಲವಾದ ಹೇಳಿಕೆಯೆ ಹೌದು, ನಾನು ಒಪ್ಪುತ್ತೇನೆ. ಹಳೆಯ ನಿಗದಿತ ಪಠ್ಯಕ್ರಮ ಹಾಗೂ ನಿಗದಿತ ಪ್ರಶ್ನೆಪತ್ರಿಕೆ ಹಾಗೂ ಪೂರ್ವನಿಶ್ಚಿತ ಮೌಲ್ಯಮಾಪನ ಮಾರ್ಗದರ್ಶಿಗಳನ್ನು ನೋಡಿ. ಸಿಸಿಇನ ಜೊತೆಗೆ ಗುರುತಿಸಿಕೊಂಡಿರುವ ಮುಕ್ತ ಪರೀಕ್ಷಾ ಮಾದರಿಯ ಆವಶ್ಯಕತೆ ಅಲ್ಲಿ ಇತ್ತೇ? ವಿದ್ಯಾರ್ಥಿಗಳು ಈಗಾಗಲೇ ಪೂರ್ವನಿರ್ಧಾರಿತ ಮಾರ್ಗದಲ್ಲಿ ಯಾವುದೆ ವೈವಿಧ್ಯ ಅಥವಾ ಮುಕ್ತತೆ ಇಲ್ಲದೆ, ಕಲಿಯಬೇಕಾದದ್ದನ್ನು ಕಲಿಯುವುದಾದರೆ, ಬೋಧನೆ ಎಂಬುದು ಪರೀಕ್ಷೆಗಾಗಿ ನಡೆಸುವ ಒಂದು ಸಾಂಪ್ರದಾಯಿಕ ತರಬೇತಿಯಷ್ಟೇ ಆಗುತ್ತದೆ. ಈ ಉದ್ದೇಶಕ್ಕೆ ಸ್ಪಷ್ಟವಾಗಿ ಸಂರಚಿಸಲಾದ, ಪಠ್ಯಕ್ರಮವನ್ನಾಧರಿಸಿ ನಡೆಸುವ ಯೂನಿಟ್ ಟೆಸ್ಟ್‌ಗಳಷ್ಟೇ ಉತ್ತಮ. ಇಲ್ಲಿ ತನ್ನೆಲ್ಲ ಮುಕ್ತತೆಯೊಂದಿಗೆ ಇರುವ ಸಿಸಿಇ ಗೊಂದಲಮಯವಾಗಿ ಕಾಣಬಹುದು ಹಾಗೂ ಉಪಯೋಗವಿಲ್ಲದ ವಿಚಾರವೆಂದೆನಿಸಬಹುದು. ಆದರೆ ನಾವು ಮಕ್ಕಳು ವಿವಿಧ ವಿಚಾರಗಳನ್ನು ವಿವಿಧ ರೀತಿಯಲ್ಲಿ ಕಲಿಯಬೇಕೆಂದುಕೊಂಡರೆ ಹಾಗೂ ಅನಿರೀಕ್ಷಿತವಾದ ಕಲಿಕೆ ಆಗಬೇಕೆಂದರೆ, ಸಿಸಿಇನ ನಮ್ಯತೆಯು ಬಹಳ ಉಪಯೋಗಕಾರಿಯಾಗಿ ಕಾಣುತ್ತದೆ. ಸಿಸಿಇಯ ಇನ್ನೊಂದು ಗುಣವು ಅದು ಮತ್ತೊಂದು ಹಳೆಯ ಘೋಷಣೆಯಾದ

'ರೂಪಣಾತ್ಮಕ ಮೌಲ್ಯಮಾಪನ'ದ ಅಂಶಗಳ ಸ್ಫೂರ್ತಿಯನ್ನು ಸೂಕ್ತವಾಗಿ ಸೆರೆಹಿಡಿದು ಕೊಂಡಿರುವುದರಲ್ಲಿದೆ.

ಗೀತಾ: ಈ ವಿಚಾರವನ್ನು ಕುರಿತು ಸಾಕಷ್ಟು ಗೊಂದಲವಿದೆ. ಇದರ ಬಗ್ಗೆ ಇನ್ನಷ್ಟು ಬೆಳಕು ಚೆಲ್ಲುತ್ತೀರಾ?

ಜೇಕಬ್: ಪರೀಕ್ಷೆಯೊಂದು ರೂಪಣಾತ್ಮಕ ಉದ್ದೇಶವನ್ನು ಯಾವಾಗ ಪೂರೈಸುತ್ತದೆ ಎಂದರೆ, ಅದರಿಂದ ಪಡೆದ ಮಾಹಿತಿಯನ್ನು ಹಿಮ್ಮಾಹಿತಿ ಎಂದು ಪರಿಗಣಿಸಿ, ಬೋಧನೆಯಲ್ಲಿ ಅವಶ್ಯವಾದ ಬದಲಾವಣೆಗಳನ್ನು ತಂದುಕೊಂಡಾಗ. ತರಗತಿಯಲ್ಲಿ, ಉದಾಹರಣೆಗೆ ಪ್ರಾರಂಭಿಕ ಹಂತದಲ್ಲಿ, ಅಂದರೆ ಜುಲೈನಲ್ಲಿ ನಡೆಸುವ ಘಟಕ ಪರೀಕ್ಷೆಯು ಸಂಕಲನಾತ್ಮಕ ಮೌಲ್ಯಮಾಪನವಾಗಿರುತ್ತದೆ, ಕಾರಣ ಅದನ್ನು ಒಂದು ಘಟಕದ/ಹಂತದ ಅನಂತರ ನಡೆಸಲಾಗುತ್ತದೆ. ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಹೇಗೆ ಬರೆದಿದ್ದಾರೆ, ಅದರನ್ವಯ ಬೋಧನೆಯಲ್ಲಿ ಏನೆಲ್ಲ ಬದಲಾವಣೆಗಳನ್ನು ತಂದುಕೊಳ್ಳಬೇಕೆಂಬ ಆತ್ಮಾವಲೋಕನ ಪ್ರಕ್ರಿಯೆ ನಡೆದರೆ, ಆಗ ಅದು ರೂಪಣಾತ್ಮಕ ಉದ್ದೇಶವನ್ನು ಪೂರೈಸುತ್ತದೆ. ಇಲ್ಲೇ ಸಿಸಿಇಯ 'ನಿರಂತರ' ಅಂಶ ಮುಖ್ಯವಾಗುವುದು. ಇದು ಬೋಧನಾ ಪ್ರಕ್ರಿಯೆಯ ಮಧ್ಯೆಯೇ ತರಗತಿಯಲ್ಲಿ ಏನು ನಡೆಯುತ್ತಿದೆ ಎಂದು ಗಮನಿಸಲು ಶಿಕ್ಷಕರಿಗೆ ಅನುವು ಮಾಡಿಕೊಡುತ್ತದೆ. ವಿದ್ಯಾರ್ಥಿಗಳು ಸರಿಯಾಗಿ ಕಲಿಯುತ್ತಿದ್ದಾರೆಯೇ ಇಲ್ಲವೇ ಎಂದು ಪರಿಶೀಲಿಸಿ, ತತ್‌ಕ್ಷಣವೇ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ. ಕೆಲವೊಮ್ಮೆ ಇದು ತಿದ್ದುವ ಕೆಲಸವನ್ನಷ್ಟೇ ಮಾಡಬಹುದು ಹಾಗೂ ಪರಿಹಾರಾತ್ಮಕ ಬೋಧನೆಯೇ ಮುಖ್ಯವಾಗಿಲ್ಲದಿರಬಹುದು. ಶಿಕ್ಷಕರು ವಿದ್ಯಾರ್ಥಿಗಳ ಸಾಧನೆಗೆ ಸೂಕ್ತವಾದ ರೀತಿಯಲ್ಲಿ ಪ್ರತಿಸ್ಪಂದಿಸಬಹುದು. ಅಂದರೆ ಪ್ರಸ್ತುತ ಪಾಠವನ್ನು ಹೇಳಿಕೊಡುವಲ್ಲಿ ಬದಲಾವಣೆ ತಂದುಕೊಳ್ಳಬಹುದು ಇಲ್ಲವೆ ಮುಂದೆ ಮಾಡಬೇಕಿರುವ ಪಾಠಗಳಲ್ಲಿ ಬದಲಾವಣೆ ತಂದುಕೊಳ್ಳಬಹುದು. ಸಿಸಿಇ ಇಂತಹ ಒಂದು ಸಾಧ್ಯತೆಯನ್ನು ಪ್ರತಿನಿಧಿಸುತ್ತದೆಂದು ನನಗನಿಸುತ್ತದೆ.

ಇದಕ್ಕೆ ವಿರುದ್ಧವಾಗಿ SCERTಯಿಂದ ಸಿಸಿಇ ಆದೇಶವಾಗಿ ಬಂದಾಗ, ಶಿಕ್ಷಕರಿಗದು ಪಾಲಿಸಬೇಕಾದ ಮತ್ತೊಂದು ನಿಯಮವಾಗಿಬಿಡುತ್ತದೆ. ಇದನ್ನೇ ತಾನೇ ಬಾಹ್ಯ ರೂಪದ ಪರೀಕ್ಷೆಗಳು ಎನ್ನುವುದು. ಹೀಗಾಗಿ ಸಿಸಿಇ ಶಿಕ್ಷಕರ ಬೋಧನೆಯಲ್ಲಿ ಸ್ಥಾನವನ್ನು ಪಡೆಯದಿದ್ದರೆ, ಅದು ನಿಜವಾಗಿ ಸಿಸಿಇ ಅಲ್ಲ. ಒಂದು ತರಗತಿಯ ವಿವಿಧ ವಿಭಾಗಗಳು, ಅಂದರೆ ಎ, ಬಿ, ಸಿ ಎಂದು ಇದ್ದಲ್ಲಿ, ಪ್ರತಿಯೊಂದು ವಿಭಾಗಕ್ಕೂ ವಿಭಿನ್ನ ಮೌಲ್ಯಮಾಪನವಿರುತ್ತದೆ ಎಂದು ನಾವು ನಿರೀಕ್ಷಿಸುತ್ತೇವೆ. ಕಾರಣ, ಪ್ರತಿ ವಿಭಾಗದಲ್ಲೂ ವಿವಿಧ ವಿದ್ಯಾರ್ಥಿಗಳಿದ್ದಾರೆ,

ಅವರಲ್ಲಿರುವ ವೈವಿಧ್ಯವನ್ನು ಹಾಗೂ ಪಠ್ಯಕ್ರಮದೊಂದಿಗಿನ ಒಡನಾಟಕ್ಕೆ ಅವರು ನೀಡುವ ವೈಯಕ್ತಿಕ ಕೊಡುಗೆಯನ್ನು ನಾವು ಗುರುತಿಸಬೇಕು. ಇದು ಒಂದು ಆದರ್ಶದಾಯಕವಾದ ಹೇಳಿಕೆ ಮತ್ತು ನನಗನಿಸುತ್ತದೆ ಬಹಳ ಪ್ರಬಲವಾದ ಹೇಳಿಕೆ ಸಹ ಎಂದು. ಶಿಕ್ಷಕರೊಬ್ಬರು ಮಾತ್ರ ಸಿಸಿಇಯನ್ನು ಮಾಡಲು ಸಾಧ್ಯ. ಇದು ಸಾಧ್ಯವಾಗಬೇಕಾದರೆ, ಓರ್ವ ಶಿಕ್ಷಕನು ಸ್ವಾಯತ್ತನಾಗಲು, ಸಶಕ್ತನಾಗಲು ಮತ್ತು ಕೌಶಲಗಳನ್ನು ಹೊಂದಲು ಸಹಾಯ ಮಾಡಬೇಕು. ಇದಕ್ಕೆ ಶಿಕ್ಷಕನು ತನ್ನ ಬೋಧನೆಯಲ್ಲಿ ಈ ಅಂಶವನ್ನು ತಂದುಕೊಳ್ಳಲು ಬೇಕಾದ ಅವಕಾಶ, ಸಮಯ ಹಾಗೂ ಸಂಪನ್ಮೂಲಗಳನ್ನು ಹೊಂದಿಸಿಕೊಳ್ಳಬೇಕು. ಸಿಸಿಇಯಿಂದ ದೊರಕುವ ಸಮೃದ್ಧವಾದ ಹಿಮ್ಮಾಹಿತಿಯು ವಿವಿಧ ಆವಶ್ಯಕತೆಗಳುಳ್ಳ ವಿದ್ಯಾರ್ಥಿಗಳಿಗೆ ಗುಣಮಟ್ಟದ ಕಲಿಕಾ ಅನುಭವಗಳನ್ನು ನೀಡುವುದಕ್ಕೆ ಶಿಕ್ಷಕರಿಗೆ ಸಹಾಯ ಮಾಡುವುದರೊಂದಿಗೆ ಅವರನ್ನು ಸಹಜವಾಗಿ ಸಶಕ್ತಗೊಳಿಸಬಲ್ಲದು.

ಹೀಗಾಗಿ ನಾನು ಸಿಸಿಇಯನ್ನು ರೂಪಣಾತ್ಮಕವೆಂದು ನೋಡುತ್ತೇನೆ. ಪ್ರಾಯೋಗಿಕ ಮಟ್ಟದಲ್ಲಿ, ಪ್ರಗತಿಯನ್ನು ದಾಖಲಿಸುವುದು ಹಾಗೂ ವರದಿ ಮಾಡುವುದು- ಇವೆರಡರ ನಡುವಿನ ವ್ಯತ್ಯಾಸವನ್ನು ಸ್ಪಷ್ಟವಾಗಿ ಗುರುತಿಸಬೇಕು. ಮಕ್ಕಳಿಗೆ ಬರವಣಿಗೆಯನ್ನು ಕಲಿಸುವ ಸಂದರ್ಭದಲ್ಲಿ ನಾವು ಡೈರಿ ಬರೆಯುವ ಉದಾಹಣೆಯನ್ನು ನೋಡಬಹುದು. ಡೈರಿ ಎಂಬುದನ್ನು ಸಾಮಾನ್ಯವಾಗಿ, ಅದು ವೈಯಕ್ತಿಕವಾದದ್ದು ಎಂದುಕೊಳ್ಳಲಾಗುತ್ತದೆ. ಬೇರೆಯವರು ಅದನ್ನು ಓದಬಾರದು. ಬಹುಶಃ ಸಂಶೋಧನೆ ಮಾಡುವವರು ಅದನ್ನು ಅಧ್ಯಯನ ಮಾಡಬಹುದು ಎಂಬುದು ಒಂದು ಅಪವಾದವೇನೋ. ಅದನ್ನು ಉನ್ನತ ಅಧಿಕಾರಿಯೂ ವಿಮರ್ಶಿಸುವ ಹಾಗಿಲ್ಲ. ಹೀಗಾಗಿ ಡೈರಿಯು ಶಿಕ್ಷಕ/ಕಿಗೆ ಅರ್ಥಪೂರ್ಣವೆನಿಸುವಂತಹ ವಿಚಾರಗಳನ್ನು ಗಮನಿಸಿ ದಾಖಲಿಸಿಕೊಳ್ಳುವ ಸ್ವಾತಂತ್ರ್ಯವನ್ನು ನೀಡುತ್ತದೆ. ಸಿಸಿಇಯಲ್ಲಿ ಮಾಡಿಕೊಂಡ ಶಿಕ್ಷಕನ/ಳ ಟಿಪ್ಪಣಿಗಳು ವೈಯಕ್ತಿಕ ಡೈರಿಯ ರೂಪದಲ್ಲಿ ಇರಬಹುದು. ಮೂಲಭೂತವಾಗಿ ಅದರಲ್ಲಿರುವ ವಿಚಾರಗಳನ್ನು ರಚನಾತ್ಮಕ ಅಂಶಗಳಾಗಿ ಉಪಯೋಗಿಸಿಕೊಳ್ಳಬಹುದು. ಆದರೆ ಅದೇ ಡೈರಿಯನ್ನು ವರದಿಯ ರೂಪದಲ್ಲಿ ಮಾಡುವುದಾದರೆ, ಅದನ್ನು ಬಾಹ್ಯವಾಗಿ, ಪ್ರಮಾಣೀಕೃತ ರೂಪದಲ್ಲಿ ಬರೆಯಲಾಗುತ್ತದೆ. ಏಕೆಂದರೆ, ಎಲ್ಲ ಶಿಕ್ಷಕರು ಒಂದೇ ರೀತಿಯಲ್ಲಿ ವರದಿಯನ್ನು ಸಲ್ಲಿಸಬೇಕೆಂದು ನಿರೀಕ್ಷಿಸಲಾಗುತ್ತದೆ. ದಾಖಲಿಸುವುದರ ಹಾಗೂ ವರದಿ ಮಾಡುವುದರ ನಡುವೆ ಇರುವ ವ್ಯತ್ಯಾಸವೆಂದರೆ- ದಾಖಲಿಸುವುದು ಶಿಕ್ಷಕನ/ಳ ಸ್ವಂತದ್ದಾಗಿರುತ್ತದೆ. ಅದರ ಕೆಲವು ಅಂಶಗಳನ್ನು ವರದಿ ಮಾಡಬಹುದು. ಆದರೆ ವರದಿಗೆ ಬೋಧನಾ

ಪ್ರಕ್ರಿಯೆಗಿರುವಂಥ ಶೈಕ್ಷಣಿಕ ಮೌಲ್ಯವಿರುವುದಿಲ್ಲ. ಬಹಳಷ್ಟು ಸಂದರ್ಭದಲ್ಲಿ, ನಿಯಮಗಳನ್ನು ಪಾಲಿಸಲು ವರದಿಯನ್ನು ತಯಾರಿಸಲಾಗುತ್ತದೆಯೇ ಹೊರತು ಅದರಲ್ಲಿ ಯಾವುದೇ ಉಪಯೋಗಕಾರಿ ಮಾಹಿತಿ ಇರುವುದಿಲ್ಲ.

ಶಿಕ್ಷಕನು/ಳು ತನ್ನ ಟಿಪ್ಪಣಿ (ಡೈರಿ)ಯಲ್ಲಿ ಮಗುವೊಂದರ ಕಲಿಕೆಯ ಚಿತ್ರಣವನ್ನು ಮಾಡಿಕೊಳ್ಳಬಹುದು, ಇದನ್ನು ಅವಶ್ಯವಿದ್ದಲ್ಲಿ ಮಗುವಿನ ಪೋಷಕರೊಂದಿಗೆ ಹಂಚಿಕೊಳ್ಳಬಹುದು. ಆದರೆ ಈ ಮಾಹಿತಿಯು ಮುಂದಿನ ತಲೆಮಾರುಗಳಿಗೆ ಬೇಕೆಂದು ಮಾಡಿಕೊಳ್ಳುವ ಟಿಪ್ಪಣಿಯಲ್ಲ ಎಂಬುದನ್ನು ನಾವಿಲ್ಲಿ ನೆನಪಿನಲ್ಲಿಡಬೇಕು. ಹೀಗೆ ಬರೆದುಕೊಳ್ಳುವ ಸಿಸಿಇ ವಿಚಾರವು ಕ್ಲಾಸಿನಲ್ಲೇನಾಗುತ್ತಿದೆ ಎಂಬುದನ್ನು ದಾಖಲಿಸಿಕೊಳ್ಳುವ ಒಂದು ಮುಕ್ತ ಮಾರ್ಗವಷ್ಟೇ. ಇದು ಕೇವಲ ಶಿಕ್ಷಕನ/ಳ ಆಂತರಿಕ ಉಪಯೋಗಕ್ಕೆ ಮಾತ್ರ ಸೀಮಿತವಾದುದು. ಹೀಗಾಗಿ ಇಲ್ಲಿ ತರಗತಿಯಲ್ಲಾಗುತ್ತಿರುವುದನ್ನು ಗಮನಿಸುವ, ಅದನ್ನು ಬರವಣಿಗೆಯಲ್ಲಿ ಒಂದು ಟಿಪ್ಪಣಿಯಾಗಿ ಗುರುತಿಸುವ, ಒಂದು ವಾಕ್ಯವಾಗಿ ಇಲ್ಲವೆ ಒಂದು ಅಡಿಗೆರೆಯಾಗಿ ಗುರುತು ಮಾಡಿಕೊಳ್ಳುವ ಶಿಕ್ಷಕನ/ಳ ಕೌಶಲ ವ್ಯಕ್ತವಾಗುತ್ತದೆ. ಹೀಗೆ ಮಾಡುವ ಮೂಲಕ ತನ್ನ ತರಗತಿಯಲ್ಲಿ ಏನಾಗುತ್ತಿದೆ ಎಂದು ಶೀಘ್ರವಾಗಿ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಮತ್ತು ಇದನ್ನು ಸಾಧ್ಯವಾಗುವ ಮಟ್ಟಿಗೆ ಮಾಡಿಕೊಳ್ಳಬಹುದು. ಹೀಗೆ ದಾಖಲಿಸಿಕೊಂಡು, ಅದರ ಮೇಲೆ ಏನು ಕ್ರಮ ಮಾಡಬೇಕೊ ಅದನ್ನು ಮಾಡಲೂಬಹುದು.

ಗೀತಾ: ನಿಮ್ಮ ಪ್ರಕಾರ ಸಿಸಿಇಯ ಸಂದರ್ಭದಲ್ಲಿ 'ಸಮಗ್ರ ಮೌಲ್ಯಮಾಪನ' ಎಂದರೇನು?

ಜೇಕಬ್: 'ಸಮಗ್ರ' ಎಂಬ ಪದವನ್ನು ಹೊಸ ಶೈಕ್ಷಣಿಕ ನೀತಿಯಲ್ಲೂ ಉಪಯೋಗಿಸಲಾಗಿದೆ. ನಾವು ಕೇವಲ ಬೌದ್ಧಿಕವಷ್ಟೇ ಅಲ್ಲ, ಭಾವನಾತ್ಮಕ, ಮಾನಸಿಕ, ದೈಹಿಕ ಹಾಗೂ ನೈತಿಕ ಮೌಲ್ಯಗಳ ಬೆಳವಣಿಗೆಯೂ ಮುಖ್ಯವೆಂದು ನಂಬಿದ್ದೇವೆ. ಇವೆಲ್ಲವೂ ಮಗುವಿನ ಶಿಕ್ಷಣದ ಉದ್ದೇಶಗಳಾಗಿವೆ. ನಾವು ಇದುವರೆಗೂ, ಕೇವಲ ಜ್ಞಾನಾತ್ಮಕ ಅಥವಾ ಬೌದ್ಧಿಕ ಪ್ರಜ್ಞೆಗೆ ಸಂಬಂಧಿಸಿದ ಅಥವಾ ತಾರ್ಕಿಕ ಗಣಿತಕ್ಕೆ ಸಂಬಂಧಿಸಿದ ಅಂಶಗಳನ್ನು, ಔಪಚಾರಿಕ ಅಥವಾ ವಿದ್ವತ್ತಿನ ಮೌಲ್ಯಮಾಪನವೆಂದು ಅಂದುಕೊಂಡಿದ್ದೇವೆ. ಉಳಿದ ಎಲ್ಲ ಅಂಶಗಳನ್ನೂ ಗೌಣವಾಗಿಸಿದ್ದೇವೆ. ಮಗುವಿನ ಸ್ವಭಾವದ ಬಗ್ಗೆ 'ಕ್ಯಾರೆಕ್ಟರ್ ಸರ್ಟಿಫಿಕೇಟ್' ಹಾಗೂ ಅದರೊಡನೆ 'ಕ್ರೀಡೆಯಲ್ಲಿ ಸಕ್ರಿಯ' ಎಂಬ ಇನ್ನೊಂದು ಸರ್ಟಿಫಿಕೇಟನ್ನು ನೀಡಲಾದರೂ, ಅದು ಮಗುವಿನ ಔಪಚಾರಿಕ ದಾಖಲೆಯ ಭಾಗವಾಗಿರುವುದಿಲ್ಲ. ಇದು ಶಾಲೆಯ ದಾಖಲಾತಿಯು

ಸಮಗ್ರವೆಂದು ತೋರಿಸುವ ಉದ್ದೇಶದಿಂದ ಹಾಗೂ ಮಗುವಿನ ಬೆಳವಣಿಗೆಯ ಉಳಿದ ಆಯಾಮಗಳನ್ನು ದಾಖಲಿಸಲು ಮಾಡಲಾಗಿರುತ್ತದೆ. ನಾವು ಬೆಳವಣಿಗೆಯ ಇನ್ನಿತರ ಆಯಾಮಗಳ ಬಗ್ಗೆ ಹೇಳಿಕೆಗಳನ್ನು ನೀಡುತ್ತೇವೆ, ಆದರೆ ಮೌಲ್ಯಮಾಪನ ಮಾಡುವಾಗ ಇದನ್ನು ನಿರ್ಲಕ್ಷಿಸುತ್ತೇವೆ. ಹೀಗಾಗಿ ಯಾರೂ ಇದಕ್ಕೆ ಗಮನವನ್ನು ಕೊಡುವುದಿಲ್ಲ. **ಬೆಳವಣಿಗೆಯ ಇನ್ನಿತರ ವಲಯಗಳನ್ನು ಅಭಿವ್ಯಕ್ತಿಸಬೇಕಾದರೆ, ವಿದ್ವತ್ತನ್ನು ಹೊರತು ಪಡಿಸಿ ಬೇರೆ ಆಯಾಮಗಳನ್ನೂ ಗುರುತಿಸಬೇಕು. ಇನ್ನಿತರ ಗುಣಗಳನ್ನು ವಿವೇಚಿಸುವ, ಗಮನಿಸುವ, ಮಾಪನ ಮಾಡುವ ಹಾಗೂ ಬೆಳೆಸುವ ಆವಶ್ಯಕತೆಗೆ ಬಂದಿರುವ ಪ್ರತಿಕ್ರಿಯೆಗಳನ್ನು ಸಿಸಿಇ ಪ್ರತಿನಿಧಿಸುತ್ತದೆ ಎಂಬುದು ನನ್ನ ಅನಿಸಿಕೆ.**

ಗೀತಾ: ಬೌದ್ಧಿಕ/ಜ್ಞಾನಾತ್ಮಕ ಹಾಗೂ ವಿದ್ವತ್ತನ್ನು ಹೊರತು ಪಡಿಸಿ, ಇನ್ನಿತರ ವಲಯಗಳಲ್ಲಿ ಆಗುವ ಬೆಳವಣಿಗೆಯನ್ನು ನೀವು ಹೇಗೆ ಸೆರೆಹಿಡಿಯುತ್ತೀರಿ?

ಜೇಕಬ್: ನಾವು ಶಿಕ್ಷಕರಿಗೆ ನಿರಂತರ ಹಾಗೂ ಸಮಗ್ರ ಮೌಲ್ಯಮಾಪನವನ್ನು ಮಾಡಲು ಉತ್ತೇಜಿಸದೆ ಹೋದರೆ ಹಾಗೂ ಅವರೊಡನೆ ಟೇಪ್ ರೇಕಾರ್ಡರ್ ಜೊತೆ ಕುಳಿತು ಅವರು ಮಾಡುವ ಕೆಲಸದ ಬಗ್ಗೆ ಚರ್ಚಿಸಿ ದಾಖಲಿಸದೇ ಹೋದರೆ ಅವರ ಬೆಳವಣಿಗೆಯನ್ನು ಸೆರೆಹಿಡಿಯಲು ಆಗುವುದಿಲ್ಲ. ಹೊರಗಿನ ತಜ್ಞರಿಗೆ ಇದು ತಿಳಿಯುವುದಿಲ್ಲ. ಈ ಧ್ವನಿಮುದ್ರಣಗಳು, ದೊಡ್ಡ ಹಾಗೂ ಸಣ್ಣ ನಗರಗಳಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿ, ೩ನೇ ಅಥವಾ ೪ನೇ ತರಗತಿಯಲ್ಲಿರುವ ಮಕ್ಕಳು ಏನು ಮಾಡುತ್ತಿದ್ದಾರೆ ಹಾಗೂ ಅವರು ಬೆಳೆಯುವ ವಿವಿಧ ಬಗೆಯೇನು ಎಂದು ತಿಳಿದುಕೊಳ್ಳಲು ಸಾಧ್ಯಮಾಡುತ್ತವೆ. ಸಿಸಿಇನ ಈ ಹುರುಪಿನಲ್ಲಿ, ನೀವು ಶಿಕ್ಷಕನಿ/ಳಿಗೆ, 'ಯಾವ ಮಗು ಕ್ಲಾಸಿನಲ್ಲಿ ಹಿಂಜರಿಯುತ್ತದೆಯೋ, ತಾನೆ ಎದ್ದು ಉದಾಹರಣೆಯನ್ನು ನೀಡಲು ಇಷ್ಟ ಪಡುವುದಿಲ್ಲವೊ, ಪ್ರಶ್ನೆಗಳಿಗೆ ಉತ್ತರಿಸುವುದಿಲ್ಲವೊ ಆ ಮಗುವಿಗೂ ನೀವೇ ಜವಾಬ್ದಾರರು, ಆ ಮಗುವಿಗೆ ಸ್ವಲ್ಪ ಮಟ್ಟಿಗಾದರೂ ಆತ್ಮಸ್ಥೈರ್ಯವನ್ನು ತುಂಬುವ ದಾರಿಯೊಂದನ್ನು ನೀವು ಕಂಡುಕೊಳ್ಳಬೇಕು' ಎಂದು ಹೇಳಬಹುದು. ಈ ವಿಚಾರವನ್ನು ಶಿಕ್ಷಕರಿಗೆ ಮುಟ್ಟಿಸಬೇಕು. ಸಿಸಿಇಯ ನಡುವೆ ಇರುವಂತಹ 'ಸಿ' ಇದು. ಬೇರೆ ಅಂಶಗಳೂ ಸಹ ಅಷ್ಟೇ ಮುಖ್ಯ.

ಗೀತಾ: ಮಗು ಮೌನವಾಗಿದ್ದರೆ ಶಿಕ್ಷಕಿ/ಕ ಏನು ಮಾಡಲು ಸಾಧ್ಯ? ಆತ್ಮಸ್ಥೈರ್ಯವನ್ನು ತುಂಬುವುದಾದರೂ ಹೇಗೆ?

ಜೇಕಬ್: ಬೋಧನೆ ಎಂದರೆ ಕಲಿಸುವುದು, ಮೌಲ್ಯಮಾಪನವಲ್ಲ. ಶಿಕ್ಷಕಿ/ಕ ಏನು ಮಾಡಬಹುದೆಂದರೆ, ಮಗುವನ್ನು ಸರಿಯಾದ ದಿಕ್ಕಿಗೆ ಮೆತ್ತಗೆ ಮುಂದೊತ್ತಬಹುದು. ಶಿಕ್ಷಕಿ/ಕ ಮಗುವಿನ ಬಗ್ಗೆ ಯಾವುದೇ ಬಗೆಯ ಅಂತಿಮ ನಿರ್ಧಾರವನ್ನು

ತೆಗೆದುಕೊಂಡು, ಗ್ರೇಡ್ ನೀಡಬೇಕಾಗಿಲ್ಲ. ಭಾಷಾ ಕಲಿಕೆಯ ಸಂದರ್ಭದಲ್ಲಿ ಮಕ್ಕಳಿಗೆ ಭಾಷಾ ಸಂಪನ್ಮೂಲಗಳಾದ ಶಬ್ದ ಸಂಪತ್ತು ಹಾಗು ವ್ಯಾಕರಣದ ಆವಶ್ಯಕತೆ ಇರುತ್ತದೆ, ನಿಧಾನವಾಗಿ ಅವರು ಹಾವ-ಭಾವಗಳನ್ನು ಬಿಟ್ಟು, ಶಬ್ದಗಳನ್ನು ಉಪಯೋಗಿಸಿ ಮಾತನಾಡಲು ಕಲಿಯುತ್ತಾರೆ. ಮಕ್ಕಳು ತಮ್ಮತಮ್ಮಲ್ಲಿಯೇ ಒಡನಾಡುವ ಸಂದರ್ಭಗಳನ್ನೂ ಸಹ ಶಿಕ್ಷಕಿ/ಕ ಗಮನಿಸಬೇಕಾಗುತ್ತದೆ. ಉದಾಹರಣೆಗೆ, ೯ನೇ ತರಗತಿಯಲ್ಲಿ ಓದುವ ಮಕ್ಕಳು ತಮ್ಮ ಬಗ್ಗೆ ಅಭಿವ್ಯಕ್ತಿಸಿಕೊಳ್ಳಲು ಯಾವುದೇ ಹಿಂಜರಿಕೆ ಇಲ್ಲದಂತೆ ಇರಬೇಕು. ಇದಕ್ಕಾಗಿ, ಸಣ್ಣ ಗುಂಪಿದ್ದರೆ ಒಳ್ಳೆಯದು, ಯಾಕೆಂದರೆ ದೊಡ್ಡ ತರಗತಿಯಲ್ಲಿ ಎಲ್ಲರೆದುರು ನಿಂತು ಮಾತನಾಡುವಾಗ ಬೇರೆಯವರು ನೋಡಿ ನಗಬಹುದು ಇಲ್ಲವೆ ತಪ್ಪುಗಳು ಆಗಬಹುದು ಎಂಬ ಭಯ ಇರುತ್ತದೆ. ಆದುದರಿಂದ ಸಣ್ಣ ಗುಂಪುಗಳಲ್ಲಿ ಕೆಲಸ ಮಾಡುವುದು ಒಳ್ಳೆಯದು. ಗುಂಪಿನಲ್ಲಿ ಅಥವಾ ಇಬ್ಬರ ಜೋಡಿ ಮಾಡಿ ವಿದ್ಯಾರ್ಥಿಗಳು ಪರಸ್ಪರ ಮಾತನಾಡಲು ಹೇಳಬಹುದು. **ಪಿಸಿಇಯಲ್ಲಿ ಮಕ್ಕಳು ಪರಸ್ಪರ ಮುಕ್ತವಾಗಿ ಮಾತನಾಡಲು ಬೇಕಾದ ಪ್ರೋತ್ಸಾಹಕರ ವಾತಾವರಣವನ್ನು ನಿರ್ಮಿಸಬೇಕು.** ಮಾತನಾಡುವ ಕೌಶಲದಂತೆ ಬೇರೆಯವರ ಮಾತನ್ನು ಕೇಳಿಸಿಕೊಳ್ಳುವುದು ಒಂದು ಪ್ರಮುಖವಾದ ಶಿಸ್ತಾಗಿದೆ. ಹೀಗಾಗಿ ಇವನ್ನೆಲ್ಲ ಸಮಗ್ರವಾಗಿ ನೋಡಬೇಕಾಗಿದೆ. ಇಲ್ಲಿ ತರಗತಿಯ ಹಂತ ಬಹಳ ಮುಖ್ಯ, ೩ನೇ ಹಾಗೂ ೪ನೇ ತರಗತಿ ಮಕ್ಕಳು ಯಾವುದರ ಬಗ್ಗೆ ಹರಟುತ್ತಾರೆ? ೫ನೇ ಹಾಗೂ ೬ನೇ ತರಗತಿ ಇಲ್ಲವೆ ೧೦ ಅಥವಾ ಕಾಲೇಜಿನ ವಿದ್ಯಾರ್ಥಿಗಳು ಯಾವುದರ ಬಗ್ಗೆ ಪರಸ್ಪರ ಮಾತನಾಡಿಕೊಳ್ಳುತ್ತಾರೆ? ಇವೆಲ್ಲದಕ್ಕೂ ಒಂದೇ ಮಾದರಿ ಇರಲು ಸಾಧ್ಯವಿಲ್ಲ; ಆದರೆ ಭಾಷಾ ಮಾದರಿಗಳು- ವ್ಯಾಕರಣ, ವಾಕ್ಯ ಜೋಡಣೆಯ ಶೈಲಿ, ಪರಸ್ಪರರನ್ನು ಸಂಬೋಧಿಸಿಕೊಳ್ಳುವ ಪದಗಳು, ಸೌಜನ್ಯಯುತ ನುಡಿಗಟ್ಟುಗಳು ಸಮಾನವಾಗಿರುತ್ತವೆ. ಅದೆಲ್ಲ ಪ್ರಯೋಜನಕಾರಿ. ಅವನ್ನು ಒಂದು ನಿರ್ದಿಷ್ಟ ಗುಂಪಿಗೆ ಅಥವಾ ಹಂತದಲ್ಲಿರುವವರನ್ನು ಒಟ್ಟಿಗೆ ಸೇರಿಸಿ ನೋಡಿದರೆ ಹೆಚ್ಚು ಉತ್ತಮವಾದ ಚಿತ್ರಣವನ್ನು ಪಡೆಯಬಹುದು.

ಗೀತಾ: ಈ 'ಮೆತ್ತಗೆ ಮುಂದೊತ್ತುವುದು' ಎಂದರೇನು? ಹಾಗೂ ಮೌಲ್ಯಮಾಪನದಲ್ಲಿ ಅದರ ಪಾತ್ರವೇನು?

ಜೇಕಬ್: **ನಾವು ಬೋಧನೆಯ ಮೂಲಕ ಏನನ್ನು ಬಯಸುತ್ತೇವೆ ಹಾಗೂ ವಾಸ್ತವ ಸಂಗತಿಯೇನು ಎನ್ನುವುದರ ನಡುವಿನ ಅಂತರವನ್ನು ಅಳೆಯುವುದೇ ಮೌಲ್ಯಮಾಪನದ ಕೆಲಸ.** ಭಾಷಾವಿಜ್ಞಾನಿಯೊಬ್ಬರು ವಿದ್ಯಾರ್ಥಿಯ ಭಾಷಾ ಬಳಕೆಯನ್ನು ಗಮನಿಸಬೇಕಾದರೆ, ತರಗತಿಗೆ ಹೋಗಿ, ಮಗುವಿನ ಭಾಷೆಯ ಸಂಪತ್ತನ್ನು, ಪದಗಳ

ಬಳಿಕೆ ಹಾಗೂ ಮಾತಿನ ಒಡನಾಟವನ್ನು ಟೇಪ್ ರೆಕಾರ್ಡರ್ ಮೂಲಕ ಇಲ್ಲವೆ ಟಿಪ್ಪಣಿಗಳನ್ನು ಮಾಡಿಕೊಳ್ಳುವ ಮೂಲಕ ದಾಖಲಿಸಿಕೊಳ್ಳಬೇಕು. ಆದರೆ, ಇದು ಕೇವಲ ವಿವರಣಾತ್ಮಕವಾದ ಹೇಳಿಕೆ. ಆದರೆ, ವಾಸ್ತವದಲ್ಲಿ ಶಿಕ್ಷಕನಿಗೆ ನಿರೀಕ್ಷೆಗಳಿರುತ್ತವೆ– ತರಗತಿ ೨ರಲ್ಲಿರುವ ಬಗ್ಗೆ ನಮಗಿರುವ ನಿರೀಕ್ಷೆಗಳಿಗಿಂತ ತರಗತಿ ೩ರಲ್ಲಿ ಹೆಚ್ಚಿನ ನಿರೀಕ್ಷೆಗಳು ಇರುತ್ತವೆ; ಹಾಗೆಯೇ ತರಗತಿ ೧೦ರಲ್ಲಿರುವ ನಿರೀಕ್ಷೆಗಿಂತ ತರಗತಿ ೧೨ರಲ್ಲಿ ನಿರೀಕ್ಷೆ ಅಧಿಕ. ನಾವು ಶಿಕ್ಷಣದ ಬಗ್ಗೆ ಮಾತನಾಡುವಾಗ ಇದೊಂದು ಮುಖ್ಯವಾದ ವಾಸ್ತವಾಂಶ. ನಮ್ಮ ನಿರೀಕ್ಷೆಯ ಈ ಮನೋಭಾವ ಹಾಗೂ ನಮಗೆ ಎದುರಾಗಬಹುದಾದ ವ್ಯತ್ಯಾಸಗಳ ಬಗ್ಗೆ ನಮಗೆ ಅರಿವಿರುವುದು ಬಹಳ ಮುಖ್ಯ. ಆದ್ದರಿಂದ, ಒಂದು ತರಗತಿ ಅಥವಾ ಹಂತದಲ್ಲಿ ವಿದ್ಯಾರ್ಥಿ ಏನು ಮಾಡಬೇಕೆಂಬ ಒಂದು ಅಂದಾಜಿದ್ದು, ಅಂದರೆ ಬೇರೆ ವಿದ್ಯಾರ್ಥಿಗಳು ಅದನ್ನು ಮಾಡುತ್ತಿದ್ದರೆ, ಆಗ ಆ ಮಟ್ಟವನ್ನು ಎಲ್ಲರೂ ಮುಟ್ಟಲು ಸಾಧ್ಯವೆಂದು ಆ ಶಿಕ್ಷಕನಿಗೆ ತಿಳಿಯುತ್ತದೆ. ಆಗ ಆ ಶಿಕ್ಷಕ/ಕಿ ಮಗುವನ್ನು ಆ ದಿಕ್ಕಿಗೆ ಮೆತ್ತಗೆ ಮುಂದೊತ್ತುತ್ತಾರೆ. ಅದನ್ನು ಮಾಡಲು ಸಾಧ್ಯವೆಂದು ವಿದ್ಯಾರ್ಥಿಯೂ ನೋಡಿದಾಗ, 'ನಾನು ಪ್ರಯತ್ನಿಸುತ್ತೇನೆ', 'ಮುಂದೆ ನಾನು ಇದನ್ನು ಸಾಧಿಸಬಲ್ಲೆ' ಅಥವಾ 'ಇದನ್ನು ಮಾಡಲು ಪ್ರಯತ್ನಿಸುವುದು ಸರಿ' ಎಂದು ಅವನಿಗೆ/ಳಿಗೆ ಅನಿಸುತ್ತದೆ– ಇವೆಲ್ಲವೂ ವಿದ್ಯಾರ್ಥಿಯನ್ನು ಮುಂದೊತ್ತುವ ಅಥವಾ ಶೈಕ್ಷಣಿಕವಾಗಿ ಪೋಷಿಸುವ ಸಿಸಿಇಯ ಅಂಶಗಳು. ಅತಿ ಹೆಚ್ಚು ಅಂಕಗಳನ್ನು ತೆಗೆದವರನ್ನು ಮಾತ್ರ ತರಗತಿಯ ಮಾದರಿಯಾಗಿ ಇಲ್ಲವೆ ಉತ್ತಮರೆಂದು ಎತ್ತಿ ಹಿಡಿಯಬಾರದು. ಸಿಸಿಇ ಇದನ್ನೇ ಸಮಸ್ಯೆಯಾಗಿ ಎದುರಿಸುತ್ತದೆ. ಕಾರಣ ಶಿಕ್ಷಕ/ಕಿಗೆ ಸಾಮಾನ್ಯವಾಗಿ ಮಾನದಂಡವೆಂಬುದಿದ್ದರೆ, ಅದು ತರಗತಿಗೆ ಮೊದಲು ಬಂದ ವಿದ್ಯಾರ್ಥಿ. ಕಾರಣ ಮೊದಲು ಬರುವುದಕ್ಕೆ ಇರುವ ಪೈಪೋಟಿ ಹಾಗೂ ಒತ್ತಡ. ನಾನು ಹೇಳಬಯಸುತ್ತಿರುವುದೇನೆಂದರೆ, ಸಾಮಾಜಿಕ ಒಡನಾಟದಲ್ಲಿ ಕೆಲವು ಮಕ್ಕಳು ಮೂಲತಃ ಮೌನವಾಗಿರುತ್ತಾರೆ, ಕೆಲವು ಮಕ್ಕಳು ಬಹಳಷ್ಟು ಮಾತನಾಡುತ್ತಾರೆ. ಶಿಕ್ಷಕರು ಪ್ರತಿ ಮಗುವಿಗೆ ಸಾಧ್ಯವೆನಿಸುವ ಅಂಶಗಳನ್ನು ಗುರುತಿಸಬೇಕು. ಸಂವೇದನಾಶೀಲರಾಗಿರುವ ಶಿಕ್ಷಕ/ಕಿಯು ಈ ಮಗುವನ್ನು ನೋಡಿ, ಈ ಮಗು ಇನ್ನೂ ಹೆಚ್ಚು ಭಾಗವಹಿಸಲು ಸಾಧ್ಯವೆಂದೂ, ಆದರೆ ಹೊಸ ಪರಿಕಲ್ಪನೆಯ ಅಥವಾ ಸಾಮಾಜಿಕ ಕಾರಣದಿಂದ ಹಿಂಜರಿಯುತ್ತಿದೆ, ಮತ್ತು ಅದನ್ನು ಹೇಗೆ ಪರೀಕ್ಷಿಸುವುದು, ಹಾಗೂ ಯಾವಾಗ ಮಧ್ಯ ಪ್ರವೇಶಿಸಿ ನೆರವಾಗುವುದು ಎಂದೂ ಯೋಚಿಸಬೇಕು. ಇದು ನಿಜವಾದ ಅರ್ಥದಲ್ಲಿ ಎಲ್ಲರನ್ನು ಒಳಗೊಳ್ಳುವ ಶಿಕ್ಷಣ. ಒಳಗೊಳ್ಳುವಿಕೆ ಎಂದರೆ, ಬೌದ್ಧಿಕವಾಗಿ ಇಲ್ಲವೆ ಸಾಮಾಜಿಕವಾಗಿ

ಭಾಗವಹಿಸುವುದಷ್ಟೆ ಅಲ್ಲದೆ, ಈಗಾಗಲೆ ಚಾಲ್ತಿಯಲ್ಲಿರುವ ವಿಚಾರಧಾರೆಯನ್ನು ಅರಿತು, ತನ್ನ ಕೊಡುಗೆ ನೀಡಬಹುದೆಂಬುದಾಗಿದೆ.

ಗೀತಾ: ಸಿಸಿಇಯ ಮುಖ್ಯ ಭಾಗ ಮೌಲ್ಯಮಾಪನವಾದುದರಿಂದ ಅದಕ್ಕೂ ಬೋಧನೆಗೂ ಯಾವ ರೀತಿ ಸಂಬಂಧವನ್ನು ನೀವು ಕಲ್ಪಿಸುತ್ತೀರಿ?

ಜೇಕಬ್: ಸಿಸಿಇ **ಅಥವಾ ರೂಪಣಾತ್ಮಕ ಮಾಪನವು ನನ್ನ ದೃಷ್ಟಿಯಲ್ಲಿ, ಬೋಧನೆಯ ವಿಸ್ತರಣೆಯೆ ಹೊರತು ಪರೀಕ್ಷಾ ಸುಧಾರಣೆಯ ವಿಸ್ತರಣೆಯಲ್ಲ.** ಬೋಧನೆ ಹಾಗೂ ಪರೀಕ್ಷೆಯೂ ಒಂದಕ್ಕೊಂದು ಅವಿನಾಭಾವವಾಗಿ ಹೊಂದಿಕೊಳ್ಳಬೇಕೆಂದಾಗ, ಅದರ ಅರ್ಥ ಅವೆರಡೂ ಒಟ್ಟೊಟ್ಟಿಗೆ ಆಗಬೇಕಾದ, ಸಾಗಬೇಕಾದ ವಿಚಾರಗಳೇ ಹೊರತು ಒಂದಾದ ಮೇಲೆ ಇನ್ನೊಂದಲ್ಲ. ಶಿಕ್ಷಕ/ಕಿ ಕಲಿಕೆಯ ಮೂಲಕ ಏನನ್ನು ಬಯಸಿದ್ದರು ಹಾಗೂ ಮಗು ಏನು ಮಾಡುತ್ತಿದೆ ಎಂಬುದರ ನಡುವೆ ವ್ಯತ್ಯಾಸ ಕಂಡಾಗ ಮೌಲ್ಯಮಾಪನದ ಅಗತ್ಯವಿರುತ್ತದೆ. ಆಗ ಶಿಕ್ಷಕ/ಕಿ ಆಗಲೇ ಅದನ್ನು ನಿವಾರಿಸಲು ಮುಂದಾಗಬಹುದು ಇಲ್ಲವೆ ಅನಂತರ ಅದನ್ನು ಕೈಗೆತ್ತಿಕೊಳ್ಳಬಹುದು. ಶಿಕ್ಷಕ/ಕಿ ತನಗೆ ತಾನೆ 'ಈಗ ಈ ಮಗು ಹೀಗೆ ಇರಲಿ, ಅನಂತರ ಅವನಿ/ಳಿಗೆ ನಾನು ನೆರವಾಗುವೆ' ಎಂದು ಗುರುತಿಸಬಹುದು. ಪರೀಕ್ಷಾ ಮಾಪನವು ಕಡಮೆ ಪ್ರಮಾಣದ ವಿದ್ಯಾರ್ಥಿಗಳ ಸಂಖ್ಯೆಯ ಗುಂಪುಗಳಲ್ಲೇ ನಡೆಯಬೇಕು. ಶಿಕ್ಷಕರ ಗಮನವು ಕ್ಲಾಸಿನಲ್ಲಿ ಹೆಚ್ಚು ಕಾಣಿಸಿಕೊಂಡ ವಿದ್ಯಾರ್ಥಿಗಳಿಂದ ಶುರುವಾಗಿ ತಮ್ಮ ಇರುವಿಕೆಯನ್ನು ತೋರಿಸಿಕೊಳ್ಳದ ವಿದ್ಯಾರ್ಥಿಗಳತ್ತ, ಕೊನೆಯ ಬೆಂಚಿನಲ್ಲಿ ಕುಳಿತುಕೊಳ್ಳುವ ವಿದ್ಯಾರ್ಥಿಗಳೆಡೆಗೂ ಚಲಿಸಬೇಕು. ಇದಕ್ಕೆ ಒಂದಿಷ್ಟು ಸಮಯ ಬೇಕಾಗುತ್ತದೆ. ಸಿಸಿಇಯನ್ನು ನಿರ್ವಹಿಸುವ ಕೌಶಲಗಳನ್ನು ಗಳಿಸಲು ಶಿಕ್ಷಕರಿಗೆ ಸುಮಾರು ೨–೩ ವರ್ಷಗಳು ಬೇಕಾಗುತ್ತವೆ. ಆದರೆ ಭಾರತದ ಪ್ರತಿಯೊಂದು ರಾಜ್ಯವೂ ಸಿಸಿಇಯ ಒಟ್ಟಾರೆ ಪ್ಯಾಕೇಜನ್ನು ಇನ್ನು ಎರಡು ತಿಂಗಳಲ್ಲಿ ಕಾರ್ಯರೂಪಕ್ಕೆ ತರಲು ಯೋಚಿಸುತ್ತಿದೆ. ಆದೇಶಗಳನ್ನು ನೀಡಬಹುದು, ಆದರೆ ಯೋಜನೆಗಳನ್ನು ಅನುಷ್ಠಾನ ಮಾಡುವುದಕ್ಕೂ ಸಿಸಿಇಯನ್ನು ಸಾಕಾರಗೊಳಿಸುವುದಕ್ಕೂ ಬಹಳ ವ್ಯತ್ಯಾಸವಿದೆ. 'ಈ ಎಲ್ಲ ನೆರವಿನಿಂದ ನಾನೀಗ ನನ್ನ ವಿದ್ಯಾರ್ಥಿಗಳಿಗೆ ಹೆಚ್ಚು ಗಮನವನ್ನು ಕೊಡಬಲ್ಲೆ ಹಾಗೂ ಹೆಚ್ಚಿನ ಆಯಾಮಗಳ ಬಗ್ಗೆ ನನಗೀಗ ಅರಿವಾಗುತ್ತಿದೆ' ಎಂದು ಶಿಕ್ಷಕ/ಕಿಯು ಹೇಳಲು ಸಾಧ್ಯವಾದರೆ ಆಗ ಸಿಸಿಇಯು ನಿಜವಾಗಿ ಸಾಕಾರಗೊಂಡಂತೆ. ಶಿಕ್ಷಕ/ಕಿಗೆ ವಿದ್ಯಾರ್ಥಿಗಳಿಗೆ ತಾನು ಹೆಚ್ಚು ನೆರವಾಗುತ್ತಿದ್ದೇನೆಂದು ಅನಿಸತೊಡಗಿದರೆ ಸಿಸಿಇಯು ರೂಪ ಪಡೆಯುತ್ತಿದೆ ಎಂದು ಅರ್ಥ. ಸಿಸಿಇಯ ಮೌಲ್ಯಮಾಪನವು ತೀರ್ಪುಕೊಡುವುದಾಗಲೀ ಅಥವಾ ಶಿಕ್ಷೆ

ಕೊಡುವುದಾಗಲಿ ಅಲ್ಲ. ಇದು ಬೋಧನೆಯ ಪ್ರಕ್ರಿಯೆಯಲ್ಲಿ ಸಾಧ್ಯವೆನಿಸುವುದನ್ನು ಗಮನಿಸಿ ಅದಕ್ಕೆ ಬೇಕಾದ ಬದಲಾಣೆಗಳನ್ನು ತಂದುಕೊಳ್ಳಲು ಸಶಕ್ತಗೊಳಿಸುವುದು ಮತ್ತು ಸ್ಪಷ್ಟತೆಯನ್ನು ನೀಡುವುದಾಗಿದೆ. ಹೀಗೆ ಮೌಲ್ಯಮಾಪನವನ್ನು ತರಗತಿಯೊಳಕ್ಕೆ ಸಂಪನ್ಮೂಲವಾಗಿ ಸಿಸಿಇ ತರುತ್ತದೆ.

* * *

ಚಿಂತನಾತ್ಮಕ ಪ್ರಶ್ನೆಗಳು:

೧. ಸಂದರ್ಶದಲ್ಲಿ ಜೇಕಬ್ ಥಾರು ಅವರು ಕಲಿಕೆಯ ಮೌಲ್ಯಮಾಪನದಲ್ಲಿ ಸಿಸಿಇ ನ ಪಾತ್ರವನ್ನು ಹೇಗೆ ವಿವರಿಸಿದ್ದಾರೆ?

೨. ಸಿಸಿಇಯನ್ನು ಶಿಕ್ಷಕರು ಹೇಗೆ ಕ್ಲಾಸಿನಲ್ಲಿ ಉಪಯೋಗಿಸಬಹುದು?

೩. ಈ ಸಂದರ್ಶನದಲ್ಲಿ ಸಮನ್ವಯ ಶಿಕ್ಷಣವನ್ನು ಹೇಗೆ ಅರ್ಥೈಸಿದ್ದಾರೆ? ಇದರ ಬಗ್ಗೆ ನಿಮ್ಮ ಅನಿಸಿಕೆಗಳೇನು?

ಗೀತಾ ದೊರೈರಾಜನ್: ಇವರು ಇಎಫ್ಎಲ್ ವಿಶ್ವವಿದ್ಯಾಲಯದಲ್ಲಿ ಮೌಲ್ಯಮಾಪನಾ ವಿಭಾಗದ ಮುಖ್ಯಸ್ಥರಾಗಿದ್ದಾರೆ. gdurairajan@gmail.com

ಲೀನಾ ಮುಖ್ಯೋಪಾಧ್ಯಾಯ್: ಇವರು ಇಎಫ್ಎಲ್ ವಿಶ್ವವಿದ್ಯಾಲಯದಲ್ಲಿ ಮೌಲ್ಯಮಾಪನಾ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದಾರೆ. linamukhopadhyay @gmail.com

ಅನುವಾದ: ಉಷಾ / **ಪರಿಶೀಲನೆ:** ನಾಗಮಣಿ ಎಸ್ ಎನ್

ಮೂಲ: *Language and Language Teaching,* Volume 3 Number 2 Issue 6 July 2014.

❑